# ಸ್ವಾಮಿ ಧೀರೇಶಾನಂದ (೧೯೦೭-೧೯೯೮)


ಮೂಲ ಬಂಗಾಳಿ: ಸ್ವಾಮಿ ಚೇತನಾನಂದ ಭಾಗ ೨ ಅನುವಾದ: ಕುಮಾರಿ ಪಿ. ಉಷಾ

### ೨೪.೧೧.೧೯೮೧, ಕಾಶಿ ಸೇವಾಶ್ರಮ

ಪ್ರಪಂಚದ ಅದೆಷ್ಟು ಚಿತ್ರಗಳು ತಾವಾಗಿ (ನಮಗೆ ತಿಳಿಯದಂತೆ) ನಮ್ಮೆದುರು ಹಾದು ಹೋಗುತ್ತಿರುತ್ತವೆ! ಉತ್ತರಾಖಂಡದ ಸಾಧುಗಳೊಬ್ಬರು ಬಯೋಸ್ಕೋಪ್‌ನ ದೃಷ್ಟಾಂತವನ್ನು ನೀಡಿ ಇದನ್ನು ವಿವರಿಸುತ್ತಿದ್ದರು. ಇಂಥ ದೃಷ್ಟಾಂತ ಸ್ವಪ್ನದಲ್ಲೂ ಇಲ್ಲ, ಏಕೆಂದರೆ ಬಯಾಸ್ಕೋಪನ್ನು ನಾವು ಜಾಗ್ರತ್ ಅವಸ್ಥೆಯಲ್ಲಿಯೇ ನೋಡುತ್ತೇವೆ. ಪರದೆಯ ಮೇಲೆ ಅದೆಷ್ಟು ಚಿತ್ರಗಳು – ಮಳೆ ಬರುತ್ತದೆ, ಬೆಂಕಿ ಉರಿಯುತ್ತದೆ – ಆದರೆ ಪರದೆ ಒದ್ದೆಯಾಗುವುದೂ ಇಲ್ಲ, ಅದು ಸುಟ್ಟುಹೋಗುವುದೂ ಇಲ್ಲ. ಶುದ್ಧ ಬ್ರಹ್ಮವು ಶುದ್ಧ ಪರದೆಯಂತೆ, ಬುದ್ಧಿಯು ಮೆಷಿನ್ ನಂತೆ. ರೀಲಿನ ಚಿಕ್ಕ-ಚಿಕ್ಕ ಚಿತ್ರಗಳು ಪರದೆಯ ಮೇಲೆ ದೊಡ್ಡದಾಗಿ ಕಾಣಿಸುತ್ತವೆ. ಅದೇ ರೀತಿ ಮಾಯೆಯ ಅಚಿಂತ್ಯ ಶಕ್ತಿಯಿಂದ ಬುದ್ಧಿಯಲ್ಲಿನ ಸೂಕ್ಷ್ಮ ವಾಸನೆಗಳು ಶುದ್ಧ ಆತ್ಮನ ಮೇಲೆ ಅಧ್ಯಾರೋಪಿತವಾಗಿ ದೃಶ್ಯರೂಪವನ್ನು ತಾಳುತ್ತವೆ. ಆದರೆ ಪರದೆಯಂತೆ ಶುದ್ಧ ಬ್ರಹ್ಮವು ಯಾವುದೇ ವಿಕಾರವನ್ನು ಹೊಂದುವುದಿಲ್ಲ.

### ೫.೦೩.೧೯೮೨, ಕಾಶಿ ಸೇವಾಶ್ರಮ

ನೀನು ಬರೆದಿರುವ ಲಾಟು ಮಹಾರಾಜರ ಪುಸ್ತಕವನ್ನು ಹುಡುಕಿ ಓದಿದೆ. ತುಂಬ ಸೊಗಸಾಗಿದೆ. ಒಳ್ಳೆಯ ಪುಸ್ತಕ. ಒಳ್ಳೆಯ ಸಂಗ್ರಹ, ಸರಿಯಾದ ವಿಷಯ ವಿಂಗಡನೆ; ಇಂಗ್ಲಿಷ್ ಕೂಡ ಚೆನ್ನಾಗಿದೆ. ಬರೆಯುವುದನ್ನು ಮುಂದುವರಿಸು. ನಿನ್ನ ಲೇಖನಿಯಲ್ಲಿ ಸರಸ್ವತಿಯು ನೆಲೆಸಲಿ! ಲೇಖನಗಳು ಹೆಚ್ಚು ದಿನ ಉಳಿಯುವುದರಿಂದ ಭಾಷಣಕ್ಕಿಂತಲೂ ಅವು ಹೆಚ್ಚು ಪ್ರಭಾವಶಾಲಿ. 'How a Sheperd Boy Became a Saint' ನ (ಸ್ವಾಮಿ ಅದ್ಭುತಾನಂದರ ಜೀವನಚರಿತ್ರೆ, ಇಂಗ್ಲಿಷ್‌ನಲ್ಲಿ.) ೮೮ ನೆಯ ಪುಟದಲ್ಲಿರುವ ಘಟನೆಯನ್ನು ನಾನು ಪೂಜ್ಯ ಸುಧೀರ್ ಮಹಾರಾಜ್ (ಸ್ವಾಮಿ ಶ್ರದ್ಧಾನಂದ)ರಿಂದ ಕೇಳಿದೆ. ಪೂಜ್ಯ ಶಾರದಾನಂದ ಮಹಾರಾಜರು ಬಹುಶಃ ಅದನ್ನು ಹೇಳಿದ್ದರು. ಘಟನೆಯು ಸುಧೀರ್ ಮಹಾರಾಜರಿಗೆ ಸಂಬಂಧಿಸಿದ್ದು. ಅವರ ವರ್ಣನೆ ಹೀಗಿದೆ: ''ಪಂಡಿತರೊಬ್ಬರು ನೀಡುವ ಉಪನಿಷತ್ತಿನ ವ್ಯಾಖ್ಯಾನವನ್ನು ಕೇಳಲು ಲಾಟು ಮಹಾರಾಜರನ್ನು ಕರೆದುಕೊಂಡು ಒಂದು ಸಭೆಗೆ ಹೋಗಿದ್ದೆ. 'ತಂ ಸ್ವಾಚ್ಛರೀರಾತ್ ಪ್ರವೃಹೇನ್ಮುಂಜಾದಿವೇಷೀಕಾಂ ಧೈರ್ಯೇಣ'' *(ಕಠೋಪನಿಷತ್ತು ೨.೩.೧೭)* — ಈ ವ್ಯಾಖ್ಯೆಯನ್ನು ಕೇಳುತ್ತಲೆ ಲಾಟು ಮಹಾರಾಜರು ಸಭೆಯ ಮಧ್ಯದಲ್ಲಿ ಗಟ್ಟಿಯಾಗಿ ಕೂಗಿ ಹೇಳಿದರು:



''ಏಯ ಸುಧೀರ್! ಪಂಡಿತರು ಹೇಳುತ್ತಿರುವುದು ಸರಿಯೆ!'' ನಾನು ತಬ್ಬಿಬ್ಬಾಗಿ ಹೇಳಿದೆ, ''ಮಹಾರಾಜ್! ಸುಮ್ಮನಿರಿ! ಸುಮ್ಮನಿರಿ!'' ಅವರು ಪುನಃ ಹಾಗೆಯೆ ಹೇಳಿದರು. ನಾನೆಂದೆ, ''ಮಹಾರಾಜ್, ಸುಮ್ಮನಿರಿ!'' ಅವರನ್ನು ಕರೆದುಕೊಂಡು ಮಠಕ್ಕೆ ಬಂದೆ. ನಾವಿಬ್ಬರೂ ಒಂದೆ ಕೋಣೆಯಲ್ಲಿರುತ್ತಿದ್ದೆವು. ರಾತ್ರಿ ನಾನು ನಿದ್ರಿಸುತ್ತಿದ್ದೆ. ಅವರು ಎದ್ದು, ನನ್ನನ್ನು ಕರೆದರು, ''ಏಯ್, ಸುಧೀರ್'' ಎಂದು ಕರೆದರು. ನಾನು ಎಚ್ಚರಗೊಂಡೆ. ಅವರೆಂದರು, ''ಪಂಡಿತರು ಹೇಳಿದ್ದು ಸರಿಯೆ.'' ನಾನು ಮತ್ತೆ ಮಲಗಿದೆ. ಅವರು ಮತ್ತೆ ಕರೆದರು. ''ಏಯ್, ಸುಧೀರ್, ಪಂಡಿತರು ಹೇಳಿದ್ದು ಸರಿಯೆ.'' ಸ್ವಲ್ಪ ಸಮಯ ಪುನಃ ಪುನಃ ಇದೇ ರೀತಿ ನಡೆಯಿತು. ರಾತ್ರಿಯೆಲ್ಲ ನನಗೆ ನಿದ್ರಿಸಲಾಗಲಿಲ್ಲ. ಲಾಟು ಮಹಾರಾಜರು ಆ ಭಾವದಲ್ಲಿ ತನ್ಮಯರಾಗಿದ್ದರು! ಅದು ಅವರ ಸ್ವಂತ ಅನುಭೂತಿಯ ವಿಷಯವಾಗಿದ್ದರಿಂದಲೇ ಅವರಿಗೆ ಅಷ್ಟೊಂದು ಉಲ್ಲಾಸ!

ಮತ್ತೊಂದು ಘಟನೆ: ಲಾಟು ಮಹಾರಾಜರು ಸ್ವಾಮೀಜಿಯವರಿಗೆ ಹೇಳುತ್ತಿದ್ದಾರೆ, ''ನೋಡು, ಸೋದರ ಲೊರೇನ್,

(ನರೇನ್ ಎಂಬುದನ್ನು ಅವರು 'ಲೊರೇನ್' ಎಂದು ಕರೆಯುತ್ತಿದ್ದರು) ಕೇಶವ ಬಾಬು ಟೌನ್ ಹಾಲಿನಲ್ಲಿ ಎಂಥ ಲೆಕ್ಚರ್ ಕೊಡ್ತಾರೆ. ನೀನೂ ಹಾಗೆಯೆ ಲೆಕ್ಚರ್ ಕೊಡಬೇಕು. ನಾನು ನಿನಗೋಸ್ಕರ ಒಂದು ಹೂಜಿ ತುಂಬ ನೀರಿಟ್ಟುಕೊಂಡು ಕುಳಿತಿರುತ್ತೇನೆ.'' ಸ್ವಾಮೀಜಿ ಅಮೆರಿಕಾದಿಂದ ಬರೆದಿದ್ದರು, ''ಸೋದರಲೇಟೋನ ಇಚ್ಛೆಯನ್ನು ಇಲ್ಲಿ ಪೂರೈಸಿದ್ದೇನೆ. ಬಹಳ ಲೆಕ್ಚರ್ ಕೊಡುತ್ತಿದ್ದೇನೆ.'' ಸ್ವಾಮೀಜಿ ಕಲ್ಕತ್ತದಲ್ಲಿ ಲೆಕ್ಚರ್ ನೀಡಿದ ಸಂದರ್ಭದಲ್ಲಿ ಲಾಟು ಮಹಾರಾಜ್ ಒಂದು ಹೂಜಿ ನೀರಿಟ್ಟುಕೊಂಡು ಕುಳಿತು ತಮ್ಮ ಇಚ್ಛೆಯನ್ನು ಹದಿನಾರಾಣೆ ಪೂರ್ಣಗೊಳಿಸಿದ್ದರು.

ಸುಖ-ದುಃಖಗಳೆರಡೂ ನಮ್ಮ ನಮ್ಮ ಕರ್ಮಕ್ಕನುಗುಣವಾಗಿ ಬರುವುವು. ಯಾರನ್ನು ದೂಷಿಸಲಿ? ಭಗವಂತನು ನಮ್ಮ ಕರ್ಮಕ್ಕೆ ತಕ್ಕಂತೆ ಸುಖ-ದುಃಖಗಳ ಫಲವನ್ನು ನೀಡುತ್ತಾನೆ. ಈ ವಿಷಯದಲ್ಲಿ ಅವನು ಯಾವುದೇ ಪಕ್ಷಪಾತವನ್ನು ಮಾಡುವುದಿಲ್ಲ. ಆದ್ದರಿಂದ ಬುದ್ಧಿವಂತನು ಎರಡನ್ನೂ ಆನಂದದಿಂದ ಸ್ವೀಕರಿಸುತ್ತಾನೆ.

**ಸುಖ ಸ್ವಪ್ನ ದುಃಖ ಬದ್ಬುದಾ, ದೋನೊ ಹೀ ಏಕ ಸಮಾನ್ ।**
**ತೀನ್‌ಕಾ ಆದರ್ ಕೀಜಿಯೆ, ಜೋ ಭೇಜೆ ಭಗವಾನ್ ॥**

ಸುಖವು ಸ್ವಪ್ನದಂತೆ, ನೋಡನೋಡುತ್ತಿದ್ದಂತೆಯೆ ಅದೃಶ್ಯವಾಗುತ್ತದೆ. ದುಃಖವು ನೀರಿನ ಮೇಲಿನ ಗುಳ್ಳೆಯಂತೆ, ಅದೂ ಸ್ಥಾಯಿಯಲ್ಲ. ಎರಡನ್ನೂ ಸಮಾನವಾಗಿ ಕಾಣಬೇಕು. ಎರಡನ್ನೂ ಸಮವಾಗಿ ಒಪ್ಪಿಕೊ. ಭಗವಂತನು ಯಾವಾಗ ಏನನ್ನು ಕೊಡುವನೊ ಅದನ್ನು ಸಂತೋಷದಿಂದ ಗ್ರಹಿಸು. ಬುದ್ಧಿವಂತನು ಹಾಗೆಯೆ ಮಾಡುವನು. ಬೇರೇನು ಮಾಡಲು ಸಾಧ್ಯ? ದುಃಖ ಬಂದಿತೆಂದರೆ ಹರುಷದಿಂದ ಕುಣಿದಾಡುವೆ. ಈ ಹರ್ಷ - ವಿಷಾದಗಳ ದ್ವಂದ್ವದಿಂದ ಪೆಟ್ಟು ತಿನ್ನುವೆ. ಇನ್ನೇನು? ಹೀಗೆ ಜೀವನವು ವ್ಯರ್ಥವಾಗುವುದು.

ಸ್ವ-ಸ್ವರೂಪದಲ್ಲಿ ಸ್ಥಿತನಾಗಿರುವುದೇ ಸುಖ, ಸ್ವರೂಪದಿಂದ ವಿಚ್ಯುತಗೊಳ್ಳುವುದೇ ದುಃಖ. ಸುಖವಾಗಿದ್ದಾಗ ಯಾರೂ 'ಏಕೆ ಚೆನ್ನಾಗಿರುವೆ'? ಅಥವ 'ಸುಖ ಏಕೆ ಬಂದಿದೆ'? ಎಂದು ಕೇಳುವುದಿಲ್ಲ. ದುಃಖದಲ್ಲಿದ್ದಾಗ ಅದಕ್ಕೆ ಕಾರಣವನ್ನು ಹುಡುಕುತ್ತಾನೆ. ಸ್ವಾಭಾವಿಕ ವಿಷಯದ ಬಗ್ಗೆ ಯಾರೂ ಪ್ರಶ್ನಿಸುವುದಿಲ್ಲ. ಬೆಂಕಿ ಸುಡುತ್ತದೆ, ನೀರು ತಣಿಸುತ್ತದೆ - ಏಕೆ ಹೀಗೆ ಎಂದು ಯಾರೂ ಪ್ರಶ್ನಿಸುವುದಿಲ್ಲ. ಇದಕ್ಕೆ ವಿರುದ್ಧವಾದರೆ ಪ್ರಶ್ನೆ ಏಳುತ್ತದೆ. ಅದೇ ರೀತಿ, ಸುಖವಾಗಿರುವುದೇ ನಮ್ಮ ಸ್ವಭಾವ. ಏಕೆಂದರೆ ಸುಖವೇ ವ್ಯಕ್ತಿಯ ಸ್ವರೂಪ. ಆದ್ದರಿಂದ ಸುಖದಲ್ಲಿ ಅಂದರೆ ಸ್ವರೂಪದಲ್ಲಿ ಸ್ಥಿತವಾಗಿದ್ದರೆ ಪ್ರಶ್ನೆ ಏಳುವುದಿಲ್ಲ. ದುಃಖ ಅಥವಾ ಸ್ವರೂಪದಿಂದ ಚ್ಯುತನಾದರೆ, 'ಏಕೆ ಹೀಗಾಯಿತು?' ಎಂದೆಲ್ಲ ಪ್ರಶ್ನೆಗಳು ಬರುತ್ತವೆ. ಆದ್ದರಿಂದ ಸುಖವೇ ಜೀವಿಯ ಸ್ವರೂಪ. ಸ್ವ-ಸ್ಥಿತಿಯೇ ಸುಖ, ಅ-ಸ್ವ-ಸ್ಥಿತಿಯೇ ದುಃಖ.

**೧೪.೧೨.೧೯೬೨, ಕಾಶಿ ಸೇವಾಶ್ರಮ**

ನನ್ನ ಅನಿಸಿಕೆಯಂತೆ, ವೇದಾಂತ ಪ್ರಕರಣ ಗ್ರಂಥಗಳಲ್ಲಿ ವಿಶೇಷವಾಗಿ ಉಪಯುಕ್ತವಾದವುಗಳೆಂದರೆ, ೧) ವಿವೇಕ ಚೂಡಾಮಣಿ ೨) ಆತ್ಮಬೋಧ ೩) ತತ್ತ್ವಬೋಧ ೪) ಉಪದೇಶ ಸಾಹಸ್ರಿ ಹಾಗು ಶಂಕರರಚಿತ ಇನ್ನೂ ಆರು ಪುಸ್ತಕಗಳು ೫) ಪಂಚದಶೀ ೬) ನೈಷ್ಕರ್ಮ್ಯಸಿದ್ಧಿ ೭)ವೇದಾಂತಸಾರ (ಟೀಕಾಸಮೇತ).

'ಪಂಚದಶೀ'ಯು ಪ್ರಕ್ರಿಯೆ, ಸಾಧನೆ ಹಾಗು ಸಾಧ್ಯ - ಈ ವಿಷಯಗಳನ್ನು ಕುರಿತ ನಿರ್ಣಯಾತ್ಮಕವಾದ ಅದ್ವಿತೀಯ ಗ್ರಂಥ. ಅಪರೋಕ್ಷಾನುಭೂತಿ, ವಾಕ್ಯವೃತ್ತಿ, ಲಘುವಾಕ್ಯವೃತ್ತಿ, ಪಂಚೀಕರಣ ವಾರ್ತಿಕ - ಇವೆಲ್ಲವೂ ಅತ್ಯುತ್ತಮ ಗ್ರಂಥಗಳು. ವೇದಾಂತ ಜ್ಞಾನವನ್ನು ತಿಳಿದುಕೊಳ್ಳಲು ಮೊದಲು ಪ್ರಕರಣ ಗ್ರಂಥಗಳನ್ನು ಓದಬೇಕು. ನಂತರ ಭಾಷ್ಯಗಳನ್ನು ಓದಬೇಕು. ಪ್ರಕರಣ ಗ್ರಂಥಗಳ ಪಠಣ-ಅಧ್ಯಯನಗಳು ನಮ್ಮ ಸಂಘದಲ್ಲಿ ವಿಶೇಷವಾಗಿ ಇಲ್ಲವಾದ್ದರಿಂದ ಭಾಷ್ಯಾದಿಗಳನ್ನು ಓದಿದರೂ ಪ್ರಕ್ರಿಯೆಗಳನ್ನು ತಿಳಿದುಕೊಳ್ಳಲಾಗದೆ ಸಿದ್ಧಾಂತಗಳ ಬಗ್ಗೆ ಸ್ಪಷ್ಟ ಧಾರಣೆಯು ಹೆಚ್ಚಿನವರಿಗೆ ಸಾಧ್ಯವಾಗುವುದಿಲ್ಲ.

ನೀನು ನನಗೆ ಹೇಳಿದ್ದ ವೇದಾಂತ ಸಂಬಂಧ ಲೇಖನವನ್ನು ಈಗ ನನ್ನಿಂದ ಬರೆಯಲು ಸಾಧ್ಯವಿಲ್ಲ. ಶರೀರವು ಅಸ್ವಸ್ಥವಾಗಿರುವುದರಿಂದ ದೇಹ ಹಾಗೂ ಮನಸ್ಸಿನಲ್ಲಿ ಮೊದಲಿದ್ದ ಶಕ್ತಿ ಸಾಮರ್ಥ್ಯಗಳು ಈಗಿಲ್ಲ. ಈಗ 'ಅಬ್ ತುಮ್ ಪರ್ ಕರೊ ಮೇರೆ ನೈಯಾ'- ಈ ಭಾವದಲ್ಲಿದ್ದೇನೆ. ಠಾಕೂರರ ನಾಮ ಜಪ ಮಾಡುತ್ತ ಕಷ್ಟವಿಲ್ಲದೆ ಹೊರಟು ಹೋಗುವಂತೆ ನೀವೆಲ್ಲ ನನಗೆ ಆಶೀರ್ವಾದ ಅರ್ಥಾತ್ ಶುಭಾಶಯಗಳನ್ನು ಕೋರಿರಿ. ಮರಣಾಂತಿಕವಾಗಿರುವ ಕೆಲವು ತೊಂದರೆಗಳ ಪ್ರಾರಬ್ಧವನ್ನು ಅನುಭವಿಸಿ ಮುಗಿಸುವೆ. ಆದ್ದರಿಂದ ಎಲ್ಲವನ್ನೂ ಸುಮ್ಮನೆ ನೋಡುತ್ತ ಹೋಗುತ್ತಿರುವೆ. ಈಗ ಈ ಪ್ರಪಂಚವೆಂಬ ಸ್ವಪ್ನವು ಮುಗಿಯುವ ಪ್ರತೀಕ್ಷೆಯಲ್ಲಿರುವೆ.

**ಯಥಾ ಗಂಧರ್ವನಗರಂ ಯಥಾ ವಾರಿ ಮರುಸ್ಥಲೇ ।**
**ತಥಾ ವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ॥**

ಈ ಭಾವವು ನಮ್ಮ ಹೃದಯಾಂತರಾಳದಲ್ಲಿಯೂ ಇದೆ. ಉತ್ತರಾಖಂಡದ ಒಬ್ಬ ವೃದ್ಧ ವೇದಾಂತಿ ಸಾಧುಗಳು ಹೇಳಿದ್ದರು: ರೋಗಗ್ರಸ್ತ ನಿಃಶಕ್ತ ಸಾಧುಗಳೊಬ್ಬರು ನನಗೆ ಹೇಳಿದ್ದರು, ''ನೋಡು, 'ಶತಂ ಜೀವ' - ನೂರು ವರ್ಷ (ದೀರ್ಘಕಾಲ) ಬದುಕು, ಎಂದು ಆಶೀರ್ವದಿಸುತ್ತಾರೆ. ಎಂಥ ಮೂರ್ಖತನ. ಈ ರೀತಿ ವೃದ್ಧನಾಗಿ ದೀರ್ಘಾಯುವಾಗಿ ಬದುಕಿರುವುದು! ಆಯಸ್ಸು ಹೆಚ್ಚಿದಷ್ಟು ಈ ರೀತಿಯ ಶರೀರದೊಂದಿಗೆ ಬದುಕಿರಬೇಕು! ಇದಕ್ಕಿಂತಲೂ ದುರ್ಭಾಗ್ಯ, ಕಷ್ಟ ಎಲ್ಲಾದರೂ ಉಂಟೆ? ಆದರೂ ಜನರು ದೀರ್ಘಾಯುಗಳಾಗಿ ಬದುಕಲಿಚ್ಛಿಸುತ್ತಾರೆ. ಎಂಥ ಮೂರ್ಖತನ! ಹೀಗೆ ವಿಚಾರ ಮಾಡಿದರೆ ವೃದ್ಧಾಪ್ಯ

ದಲ್ಲಾದರೂ ಶರೀರದ ಮೇಲೆ ವೈರಾಗ್ಯವುಂಟಾಗುತ್ತದೆ. ಇದು ವಿಚಾರ ಮಾಡುವವರಿಗೆ ಮಾತ್ರ. ಇತರರಿಗೆ ಅನ್ವಯಿಸುವುದಿಲ್ಲ. ಶಾಸ್ತ್ರಗಳ ಉದ್ದೇಶವೂ ಇದೇ. ಆದ್ದರಿಂದ ಶಾಸ್ತ್ರಗಳು ಹೇಳುತ್ತವೆ – 'ಜಿಜೀವಿಷೇತ್ ಶತಂ ಸಮಾಃ!'

ಶುಕದೇವನ ಆತ್ಮಜ್ಞಾನವನ್ನು ಪರೀಕ್ಷಿಸಲು ರಾಜರ್ಷಿ ಜನಕರು ಅವರಿಗೆ ನಗರ-ಪ್ರದಕ್ಷಿಣೆ ಮಾಡಿ ಬರಲು ಹೇಳಿದರು. ಶುಕ ಹಿಂದಿರುಗಿ ಬಂದಾಗ ಜನಕ ಕೇಳಿದ, ''ಏನು ನೋಡಿದೆ?'' ಶುಕ ಉತ್ತರಿಸಿದ, ''ಸಕ್ಕರೆಯ ಗೊಂಬೆಗಳೆಲ್ಲ ಇತರ ಸಕ್ಕರೆಯ ಗೊಂಬೆಗಳೊಡನೆ ರಾಗ-ದ್ವೇಷಾತ್ಮಕ ವ್ಯವಹಾರದಲ್ಲಿ ತೊಡಗಿರುವರು.'' ಜನಕ ಮತ್ತೆ ಪ್ರಶ್ನಿಸಿದ, ''ಈಗೇನು ನೋಡುತ್ತಿರುವೆ?'' ಶುಕ ಹೇಳಿದ, ''ಒಂದು ಸಕ್ಕರೆಯ ಗೊಂಬೆಯು (ಜನಕ) ಮತ್ತೊಂದು ಸಕ್ಕರೆಯ ಗೊಂಬೆಯನ್ನು (ಶುಕ) ಪ್ರಶ್ನಿಸುತ್ತಿದೆ ಹಾಗೂ ಅದು ಉತ್ತರಿಸುತ್ತಿದೆ.'' ಜನಕ ಹೇಳಿದ, ''ಹೋಗು, ಈಗ ನೀನು ಆತ್ಮಜ್ಞಾನದಲ್ಲಿ ಪ್ರತಿಷ್ಠಿತನಾಗಿರುವೆ.''

ಎಂಥ ಮಾತು! ನಾವೂ ಸಹ ಇದೇ ರೀತಿ ಆಗಬೇಕಲ್ಲವೆ? ಏನು ಹೇಳುತ್ತೀಯೆ ?

**೪.೦೨.೧೯೮೩, ಕಾಶಿ ಸೇವಾಶ್ರಮ**

ನಿನಗೊಂದು ಕಥೆ ಹೇಳುತ್ತೇನೆ, ಕೇಳು.

ವಿಖ್ಯಾತ ರಾಜಪಂಡಿತರೊಬ್ಬರು ತಮ್ಮ ಪುಟ್ಟ ಮಗನಿಗೆ ಅನೇಕ ಶಾಸ್ತ್ರಯುಕ್ತ-ಹರಿಕಥೆಗಳನ್ನು ಬಾಯಿಪಾಠ ಮಾಡಿಸಿದ್ದರು. ಒಂದು ದಿನ ರಾಜನ ಅನುಮತಿಯನ್ನು ಪಡೆದು ಆ ಬಾಲಕನ ಹರಿಕಥೆಯನ್ನು ಏರ್ಪಡಿಸಲಾಯಿತು. ಬಾಲಕನು ಬಹಳ ಚೆನ್ನಾಗಿ ಮಂಗಳಾಚರಣವನ್ನು ಮಾಡಿ ಬಳಿಕ ನಾನಾ ಶಾಸ್ತ್ರ-ಪ್ರಮಾಣಗಳೊಂದಿಗೆ ಹರಿಕಥೆಯನ್ನು ಮಾಡಿದಾಗ ಎಲ್ಲರೂ ಅದನ್ನು ಕೊಂಡಾಡಿದರು. ಅಷ್ಟರಲ್ಲಿ ಎಲ್ಲಿಂದಲೋ ಹಕ್ಕಿ ಮರಿಯೊಂದು ಬಂದು ರಾಜಸಭೆಯಲ್ಲಿದ್ದ ಪುಟ್ಟ ಬಾಲಕನೆದುರು ಕುಳಿತಿತು. ಬಾಲಕನು ಸ್ಥಾನ-ಕಾಲಗಳನ್ನು ಮರೆತು ಹಕ್ಕಿಮರಿಯನ್ನು ಹಿಡಿಯಲೆಂದು ತಾನು ತೊಟ್ಟಿದ್ದ ಟೋಪಿಯನ್ನು ತೆಗೆದು ಹಕ್ಕಿ ಮರಿಯ ಮೇಲೆ ಬೋರಲು ಹಾಕಿ ಅದನ್ನು ಹಿಡಿದನು. ಇದನ್ನು ಕಂಡ ಮಂತ್ರಿಯು ನಗುತ್ತ ರಾಜನಿಗೆಂದನು, ''ಮಹಾರಾಜರೆ, ಈ ಬಾಲಕನು ತೋರಿದ ಪಾಂಡಿತ್ಯವೆಲ್ಲ ಅವನ ತಂದೆಯಿಂದ ಕಲಿತದ್ದು, ಸ್ವಂತ ಕರಗತ ಮಾಡಿಕೊಂಡ ಪಾಂಡಿತ್ಯವಲ್ಲ. ಅವನ ನಿಜವಾದ ಸ್ವಭಾವ ನಮ್ಮೆದುರು ಈಗ ಪ್ರಕಟಗೊಂಡಿದೆ!''

ಎಷ್ಟೇ ಮಹತ್ತರ ಕಾರ್ಯವನ್ನು ಮಾಡಿದರೂ, ದೊಡ್ಡ ದೊಡ್ಡ ಮಾತುಗಳನ್ನಾಡಿದರೂ, ವ್ಯಕ್ತಿಯ ನಿಜವಾದ ಸ್ವಭಾವ ಒಂದಲ್ಲ ಒಂದು ದಿನ ಹೊರ ಬರುತ್ತದೆ. 'ಸ್ವಭಾವೋ ದುರತಿಕ್ರಮಃ'

**೫.೧೧.೧೯೮೪, ಕಾಶಿ ಸೇವಾಶ್ರಮ**

ತತ್ತ್ವಜ್ಞಾನವನ್ನು ಪಡೆಯುವ ಪಥದಲ್ಲಿ ಕೋಟಿ ವಿಘ್ನಗಳು ಎದುರಾಗುತ್ತವೆ. ಬರಿಯ ಮಂದಿರದ ದರ್ಶನದ ಪಥದಲ್ಲಿ ೫೦ ಲಕ್ಷ ವಿಘ್ನಗಳು! ಗಂಗಾಸ್ನಾನಕ್ಕೆ ಹೋಗುವಾಗ, ೨೫ ಲಕ್ಷ ದಾನ ಮಾಡುವಾಗ ಹನ್ನೆರಡೂವರೆ ಲಕ್ಷ ವಿಘ್ನಗಳು. ಇವು ದೃಷ್ಟಿಗೋಚರವಲ್ಲದ ಅದೃಶ್ಯ ವಿಘ್ನಗಳು. ಇದನ್ನು ಕೇಳಿದ ಭೀಮಸೇನ ಕೇಳಿದ, 'ಹೇ ಕೃಷ್ಣ! ವಿಘ್ನಗಳು ಎಲ್ಲಿದೆಯೆಂಬುದನ್ನು ಹೇಳು. ನಾನು ನನ್ನ ಗದೆಯಿಂದ ಅವೆಲ್ಲವನ್ನೂ ಹೊಡೆದು ಹಾಕುತ್ತೇನೆ.'' ಅದಕ್ಕೆ ಕೃಷ್ಣನೆಂದ, ''ಈ ವಿಘ್ನಗಳು ಕಣ್ಣಿಗೆ ಕಾಣುವುದಿಲ್ಲ. ತಿಳಿದುಕೊಳ್ಳುವ ಇಚ್ಛೆ ನಿನಗಿದ್ದರೆ, ವಿಶೇಷ ಉತ್ಸವದ ದಿನವಾದ ಇಂದು ಗಂಗಾಸ್ನಾನವನ್ನು ಮಾಡು. ವಿಘ್ನಗಳ ಬಗ್ಗೆ ತಿಳಿಯುತ್ತದೆ.'' ಗದಾಧಾರಿ ಭೀಮಸೇನನನು ಗಂಗಾತೀರದಲ್ಲಿ ಸೇರಿದ್ದ ಲೋಕಾರಣ್ಯದ ನಡುವೆ ವಿಘ್ನಗಳನ್ನರಸಿ ಹೊರಟ. ಯಾವ ವಿಘ್ನವನ್ನೂ ಕಾಣದೆ ಅವನು ಹಿಂದಿರುಗಿದಾಗ, ಕೃಷ್ಣ ಕೇಳಿದ, ''ವಿಘ್ನವನ್ನು ಕಂಡೆಯಾ?'' ''ಎಲ್ಲಿ? ಹುಡುಕಿದೆ. ಸಿಗಲಿಲ್ಲ. ದಿನವಿಡೀ ವಿಘ್ನಗಳನ್ನು ಹುಡುಕುತ್ತ ಅಲೆದಾಡುತ್ತಿದ್ದೆ.'' ''ನೋಡಿದೆಯಾ? ಎಷ್ಟೊಂದು ಜನರು ಅದೆಷ್ಟು ದೂರ-ದೂರದಿಂದ ಬಂದು ಗಂಗಾಸ್ನಾನವನ್ನು ಮಾಡಿದರು! ಆದರೆ ನೀನು ಗಂಗಾತೀರದಲ್ಲೇ ದಿನವೆಲ್ಲ ಓಡಾಡುತ್ತಿದ್ದರೂ, ಗಂಗಾಸ್ನಾನ ಮಾಡಲು ಸಮಯ ದೊರೆಯಲಿಲ್ಲ. ಈಗಲಾದರೂ ತಿಳಿಯಿತೆ, ಶುಭಕಾರ್ಯದಲ್ಲಿ ಎಷ್ಟು ವಿಘ್ನಗಳೆಂಬುದು?'' ''ಹ್ಞುಂ ತಿಳಿಯಿತು''

**ವಿದ್ಯಾಯಾಂ ಧನ್ವಿನಾಂ ಕೋಟಿ ತದರ್ಥಂ ಹರಿಮಂದಿರೇ ।**
**ತದರ್ಥಂ ಜಾಹ್ನವೀತೀರೇ ತದರ್ಥಂ ದಕ್ಷಿಣೇ ಕರೇ ।**

'ಧನ್ವಿನಾಂ ಕೋಟಿ', ಅಂದರೆ, ಕೋಟಿ ಯೋಧರು ವಿಘ್ನಗಳನ್ನೊಡ್ಡುತ್ತಾರೆ. 'ದಕ್ಷಿಣೇ ಕರೇ' ಅಂದರೆ ಬಲಗೈಯಿಂದ ದಾನ ನೀಡುವಾಗ ಹನ್ನೆರಡು ಲಕ್ಷ ವಿಘ್ನಗಳು – ಶುಭಕರ್ಮದಲ್ಲಿ ಅನೇಕ ವಿಘ್ನಗಳು ಎಂಬುದನ್ನು ಈ ರೀತಿಯಾಗಿ ರೂಪಕದ ಸಹಾಯದಿಂದ ವರ್ಣಿಸಲಾಗಿದೆ. ಕಥೆ ಚೆನ್ನಾಗಿದೆಯಲ್ಲವೆ?

**೧೦.೧೧.೧೯೮೪, ಕಾಶಿ ಸೇವಾಶ್ರಮ**

ಶೀತ-ಕೆಮ್ಮುಗಳಿಂದ ಶರೀರ ದುರ್ಬಲವಾಗಿದೆ. ಆಯಸ್ಸು ಮುಗಿಯುತ್ತಿರುವಂತಿದೆ. ಈಗ 'ರಾಮ, ರಾಮ' ಎನ್ನುತ್ತ ಉಳಿದಿರುವ ದಿನಗಳನ್ನು ಕಳೆದರೆ ಸಾಕು. ಆದ್ದರಿಂದ ಪ್ರತಿನಿತ್ಯವೂ ಪ್ರಾರ್ಥಿಸುತ್ತೇನೆ:

**ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಮ್ ।**
**ದೇಹಿ ಮೇ ಕೃಪಯಾ ದೇವ ತ್ವಯಿ ಭಕ್ತಿಮಚಂಚಲಾ ॥**

ಸುನೀಲ ಮಹಾರಾಜರಿಗೆ (ಸ್ವಾನಂದ) ಈಗ ಕೆಲಸಕಾರ್ಯಗಳಲ್ಲಿ ಮನಸ್ಸಿಲ್ಲ. ಶೀಘ್ರದಲ್ಲೇ ಎಲ್ಲವನ್ನೂ ಬಿಟ್ಟು ಬಂದುಬಿಡಬೇಕೆಂದಿದ್ದಾರೆ ಎಂದು ಕೇಳಿದೆ. ಅವರು ಹೇಗಿರುವರೆಂದು ವಿಚಾರಿಸು. *(ಮುಂದುವರಿಯುವುದು)*